IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)
An International Open Access, Peer-reviewed, Refereed Journal

# ಮಹಿಳೆ ಮತ್ತು ಕನ್ನಡ ಸಾಹಿತ್ಯ

**Ms. Jayashree K S**
Assistant Professor in Kannada,
T. John College, Bangalore-83

**ಸಂಕ್ಷಿಪ್ತ :**

ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಗಂಡಸರೇ ಶ್ರೇಷ್ಠ ಎಂಬಂತಹ ಕಲ್ಪನೆಗಳಿರುವಾಗ ಹೆಣ್ಣು ತಾನೂ ಕೂಡ ಶ್ರೇಷ್ಠ ಎಂದು ಹೇಳಿಕೊಳ್ಳಲು ಅಪಾರ ಸಿದ್ಧತೆ ಮತ್ತು ಮನೋಸ್ಥೈರ್ಯ ಬೇಕು. ಮಹಿಳೆಯರ ಸಾಹಿತ್ಯವನ್ನು ವಿಮರ್ಶಕರು ಕಡೆಗಣಿಸಿರುವುದರ ಬಗ್ಗೆ ಲೇಖಕಿಯರಲ್ಲಿ ಬೇಸರವಿದೆ.

ಅನಾದಿಕಾಲದಿಂದಲೂ ಮಹಿಳೆ ಪುರುಷ ಪ್ರಧಾನ ಸಮಾಜದಲ್ಲಿ ನಾಲ್ಕು ಗೋಡೆಯ ಮಧ್ಯದಲ್ಲಿ ನಲುಗಿ ಹೋಗಿದ್ದಳು. ಕಾಲಕ್ರಮೇಣ ಮಹಿಳೆ ಯಾವಾಗ ತನ್ನ ಅಸ್ಥಿತ್ವದ ಬಗ್ಗೆ ಚಿಂತಿಸಲು ಪ್ರಾರಂಭಿಸಿದಳೋ ಆಗಿನಿಂದ ಪುರುಷ ಪ್ರಧಾನ ಸಮಾಜದಲ್ಲಿ ತಾನು ಒಬ್ಬ ವ್ಯಕ್ತಿ ತನಗೂ ಎಲ್ಲ ಹಕ್ಕು ಬಾಧ್ಯತೆ ಪಡೆಯುವ ಸಾಮರ್ಥ್ಯವಿದೆ ಎನ್ನುವುದನ್ನು ಯೋಚಿಸಿ, 20ನೇ ಶತಮಾನದಿಂದೀಚೆಗೆ ಮಹಿಳೆಯರು ಮಹತ್ವದ ಸಾಹಿತ್ಯ ರಚನೆ ಮಾಡಿರುವುದು ಕಂಡು ಬರುತ್ತದೆ.

ಮೊದ ಮೊದಲು ಮಹಿಳೆಯರು ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ತಾವು ಹೊಂದಿರುವ ನಿಲುವಿನೊಂದಿಗೆ ಸ್ತ್ರೀ ಸಂವೇದನೆಗಳನ್ನೊಳಗೊಂಡ ಕಾದಂಬರಿಗಳನ್ನು ರಚಿಸುತ್ತಿದ್ದರು. ನಂತರದ ದಿನಗಳಲ್ಲಿ ಸಮಾಜದಲ್ಲಿ ತಮಗಾದ (ಹೆಣ್ಣಿಗಾದ) ದೌರ್ಜನ್ಯವನ್ನು ಪ್ರಶ್ನಿಸುವ ಮೂಲಕ ಬರವಣಿಗೆಯ ಮೂಲಕ ತಮ್ಮ ಅನಿಸಿಕೆಗಳನ್ನು ನೋವುಗಳನ್ನು ಹೊರ ಹಾಕುತ್ತಿದ್ದರು. ಒಟ್ಟಿನಲ್ಲಿ ಕನ್ನಡ ಸಾಹಿತ್ಯಕ್ಕೆ ಮಹಿಳಾ ಕೊಡುಗೆ ಅವಶ್ಯಕವಾಗಿದೆ.

ಮುಖ್ಯ ಪದಗಳು : ಮಹಿಳೆ, ಲೇಖಕಿ, ಕನ್ನಡ ಸಾಹಿತ್ಯ

**ಸಾರಾಂಶ:**

"ಕಾರ್ಯೇಷು ದಾಸಿ"

"ಕರುಣೇಶು ಮಂತ್ರಿ"

"ಭೋಜ್ಯೇಷು ಮಾತಾ"

"ರೂಪೇಶು ಲಕ್ಷ್ಮಿ"

"ಶಯನೇಷು ರಂಭಾ"

"ಕ್ಷಮಯಾ ಧರಿತ್ರಿ"

ಅಬ್ಬಬ್ಬಾ! ಸ್ತ್ರೀಯರಿಗೆ ಎಷ್ಟೆಲ್ಲಾ ಬಿರುದುಗಳನ್ನು ನೀಡಿದೆ ನಮ್ಮ ಸಮಾಜ. ಹೊಗಳಿ ಹೊಗಳಿ ಸ್ತ್ರೀಯರನ್ನು ಅಟ್ಟಕ್ಕೇರಿಸಿ ಕೂರಿಸಿದೆ ನಮ್ಮ ಸಮಾಜ. ಅದರಿಂದಲೇ ತೃಪ್ತಿಗೊಂಡಿರುವ ಸ್ತ್ರೀಯರು ಆ ಅಟ್ಟದಿಂದ ಕೆಳಗಿಳಿಯದೆ ನಮ್ಮ ಸ್ಥಾನ ಇದೆ ಎಂದು ತಿಳಿದು ತಮ್ಮ ಮನೆಯ ನಾಲ್ಕು ಗೋಡೆಗಳ ಮಧ್ಯೆಯೇ ತಮ್ಮ ಸುಖ-ದುಃಖ, ನೋವು-ನಲಿವುಗಳನ್ನು ಮುಂತಾದ ಭಾವನೆಗಳನ್ನು ತಮ್ಮಲ್ಲಿಯೇ ಅದುಮಿಟ್ಟು ಕೊಂಡಿದ್ದರು. ಆದರೆ ಕೆಲ ಸ್ತ್ರೀಯರು ಮಾತ್ರ ಆ ಹೊಗಳಿಕೆಯ

ಹಿಂದಿರುವ ಪುರುಷ ಪ್ರಧಾನ ಸಮಾಜದ ಬಗ್ಗೆ ಅರಿತು ತಮ್ಮ ಅಭಿಪ್ರಾಯಗಳನ್ನು ತಮ್ಮ ವ್ಯಕ್ತಿತ್ವಗಳನ್ನು ತಮ್ಮ ಬರಹಗಳಿಂದಲೆ ಸಮಾಜಕ್ಕೆ ತಿಳಿಸಬೇಕೆಂದು ಸಾಹಿತ್ಯ ಕ್ಷೇತ್ರಕ್ಕೆ ನಿಧಾನವಾಗಿ ಕಾಲಿಟ್ಟರು.

ಮಹಿಳೆಯರು ದಾಸಿಯಾಗಿ, ಮಂತ್ರಿಯಾಗಿ, ಮಾತೆಯಾಗಿ, ಲಕ್ಷ್ಮಿಯಾಗಿ, ರಂಭೆಯಾಗಿ ಕಡೆಗೆ ಕ್ಷಮಯಾಧರಿತ್ರಿಯಾಗಿಯೇ ಉಳಿಯಬೇಕೆ? ಯಾಕೆ ಅವಳಿಗೂ ಒಂದು ಮನಸ್ಸಿರುತ್ತದೆ ಎಂಬುದು ಈ ಪುರುಷ ಪ್ರಧಾನ ಸಮಾಜಕ್ಕೆ ಏಕೆ ತಿಳಿಯುವುದಿಲ್ಲ? ಅವಳ ಮನಸ್ಸಿನ ಭಾವನೆಗಳನ್ನು ಅವಳೇ ಹೇಳಿಕೊಂಡರೆ ಮಾತ್ರ ಅದಕ್ಕೆ ಅದರದೇ ಆದ ಭಾವ ತೀವ್ರತೆ ಇರುತ್ತದೆ. ಅವಳ ಮನಸ್ಸಿನ ಕನ್ನಡಿಯಾಗಿ ಅವಳ ಸಾಹಿತ್ಯ ಮೂಡಿಬರುತ್ತದೆ.

ಸಮಾಜದ ಅರ್ಧ ಭಾಗವೇ ಹೆಣ್ಣು. ಆಕೆ ಪುರುಷರಿಗಿಂತ ಯಾವುದರಲ್ಲಿ ಕಡಿಮೆ ಇಲ್ಲ. ಅವಳ ಅಭಿವ್ಯಕ್ತಿತ್ವವನ್ನು ವ್ಯಕ್ತಪಡಿಸಲು ಅವಳಿಗಿರುವ ಮಾರ್ಗ ಒಂದೇ. ಅದೇ "ಮಹಿಳಾ ಸಾಹಿತ್ಯ". ಇಲ್ಲಿ ಆಕೆ ತನ್ನ ಅನಿಸಿಕೆಯನ್ನು ತನ್ನ ರೋಷವನ್ನು ತನ್ನ ನೋವನ್ನು ತನ್ನ ಸಂತೋಷವನ್ನು ಬಿಚ್ಚು ಮನಸ್ಸಿನಿಂದ ಹೇಳಿಕೊಳ್ಳುವ ಸಾಧ್ಯತೆ ಹೆಚ್ಚಾಗಿಯೇ ಇದೆ. ಬನ್ನಿ, ಈಗ ಮಹಿಳೆ ಯಾವ ರೀತಿ ತನ್ನ ಅಸ್ತಿತ್ವವನ್ನು ಕನ್ನಡ ಸಾಹಿತ್ಯದಲ್ಲಿ ಕಂಡುಕೊಂಡಿದ್ದಾಳೆ ಎಂಬುದನ್ನು ತಿಳಿಯೋಣ.

ಸ್ತ್ರೀಯರು ಕಾವ್ಯ ರಚನೆಗೆ ಕೈ ಹಾಕಿದ್ದು ಯಾವಾಗ ಎಂದು ನಿರ್ಧರಿಸುವುದು ಬಹಳ ಕಷ್ಟ. ಆದರೂ ಕೆಲವು ಸುಳಿವುಗಳಿಂದ ನಮಗೆ ಸ್ತ್ರೀಯರ ಬರವಣಿಗೆ ವೈದಿಕ ಕಾಲದಿಂದಲೇ ಬಂದಿದೆ ಎಂದು ತಿಳಿಯುತ್ತದೆ. ವೈದಿಕ ಕಾಲದಲ್ಲಿದ್ದ ಸ್ತ್ರೀ ವಿದ್ವಾಂಸರೆಂದರೆ ಲೋಪಾ, ಲೋಪಮುದ್ರೆ ಹಾಗೂ ಗಾರ್ಗಿ. ಇವರೆಲ್ಲ ವೈದಿಕ ಕಾಲದಲ್ಲಿದ್ದ ಮಹಿಳಾ ಲೇಖಕಿಯರು ಎಂದರೆ ತಪ್ಪಾಗಲಾರದು. ಕರ್ನಾಟಕದ ಕೆಲವು ರಾಣಿಯರು ಸಂಸ್ಕೃತದಲ್ಲಿ ಕಾವ್ಯ ರಚನೆ ಮಾಡಿದರೆಂದು ತಿಳಿದು ಬಂದಿದೆ. ಅವರಲ್ಲಿ ಬಾದಾಮಿ ಚಾಲುಕ್ಯರ ಕಾಲ "ವಿಜಯ" ಅಥವಾ "ವಿಜ್ಜಿಕೆ" ಎಂಬ ರಾಣಿ (ಕೌಮುದಿ ಮಹೋತ್ಸವ) ಇವಳ ಜೊತೆಗೆ 14ನೇ ಶತಮಾನದ ವಿಜಯನಗರದ ಹಿರಿಯ ಕೆಂಪಣ್ಣನ ಹೆಂಡತಿಯಾದ ಗಂಗಾದೇವಿ "ಮಧುರ ವಿಜಯ" ಎಂಬ ಕೃತಿಯನ್ನು ರಚಿಸಿ ಮಹಿಳಾ ಸಾಹಿತ್ಯಕ್ಕೆ ಕೊಡುಗೆಯಾಗಿ ನೀಡಿದ್ದಾರೆ. ಆದರೆ ಇವರಿಬ್ಬರೂ ಕನ್ನಡದಲ್ಲಿ ಏಕೆ ಕೃತಿ ರಚನೆ ಮಾಡಲು ಮನಸ್ಸು ಮಾಡಲಿಲ್ಲವೋ ತಿಳಿಯದು.

ಸದ್ಯಕ್ಕೆ ಕನ್ನಡದ ಮೊದಲ ಕವಿಯತ್ರಿ ಕಂತಿ ಎಂದು ಹೇಳಬಹುದು. ಕಂತಿ ಎಂದರೆ ಹೆಸರೇ ಎಂಬುದು 12ನೇ ಶತಮಾನದ ಆರಂಭದಲ್ಲೇ ಸಂಶೋಧಕರ ಸಂದೇಹಕ್ಕೆ ಒಳಗಾಗಿತ್ತು. ಏಕೆಂದರೆ ಕಂತಿ ಎಂದರೆ ಜೈನ ಸನ್ಯಾಸಿನಿ ಎಂದರ್ಥ ಆಕೆ ನಾಗಚಂದ್ರನ ಕಾಲದಲ್ಲಿ ಇದ್ದಳು ಎಂದು ಕೆಲವು ಸಂಶೋಧಕರು ಹೇಳುತ್ತಾರೆ. ಆದರೆ ಆಕೆ ನಾಗಚಂದ್ರನ ಕಾಲದಲ್ಲಿ ಇದ್ದದ್ದೇ ಆದರೆ, ನಾಗಚಂದ್ರನೇ ಈಕೆಯ ಹೆಸರನ್ನು ತನ್ನ ಕೃತಿಗಳಲ್ಲಿ ಹೇಳದೇ ಇರುತ್ತಿರಲಿಲ್ಲ. ಹಾಗೂ ನಾಗಚಂದ್ರನ ನಂತರ 400 ವರ್ಷಗಳ ನಂತರ ಬಾಹುಬಲಿ ಎಂಬ ಕವಿಯ ಕೃತಿಯಲ್ಲಿ ಕಾಣಿಸಿಕೊಂಡು 300 ವರ್ಷಗಳ ನಂತರ, ದೇವಚಂದ್ರನು ಈಕೆಯನ್ನು ಕುರಿತು ಕವಿಚರಿತೆ ಕಲ್ಪಿತವಾದುದನ್ನು ಕಂಡರೆ ಅವಳ ಅಸ್ತಿತ್ವದ ಬಗೆಗೂ ಕಾಲ ದೇಶ ಜೀವನ ಸಂಗಾತಿಗಳ ಬಗೆಗೂ ಸಾಕಷ್ಟು ತೊಡಕು ಸಂಶಯ ಇರುವಂತೆ ತೋರುತ್ತದೆ. ಒಂದು ವೇಳೆ ಅವಳು ನಾಗಚಂದ್ರನ ಕಾಲದಲ್ಲಿ ಇದ್ದದ್ದೇ ಆದರೆ ಆಕೆ ಕನ್ನಡದ ಮೊಟ್ಟಮೊದಲ ಕವಿಯತ್ರಿ ಆಗುತ್ತಾಳೆ.

ಕಂತಿಯನ್ನು ಬಿಟ್ಟರೆ ಕನ್ನಡದ ನಿಜವಾದ ಮೊಟ್ಟಮೊದಲ ಹಾಗೂ ಮೊದಲ ವರ್ಗದ ಕವಿಯತ್ರಿಯೇ ಅಕ್ಕ ಮಹಾದೇವಿ. ಅವಳ ಚಿಂತನೆಗೆ ಸಾಹಿತ್ಯ ನಿರ್ಮಿತಿಯಲ್ಲಿ ಪಾಲುಗೊಂಡು, 30ಕ್ಕೂ ಮೀರಿದ ಸಂಖ್ಯೆಯ ಗಣ್ಯವಾದ ವಚನಗಾರ್ತಿಯರು ಇದ್ದಾರೆ. ನಿಜವಾಗಿಯೂ ಸ್ತ್ರೀಯರಿಗೆ ಆತ್ಮ ಪ್ರತ್ಯಯವನ್ನು ಸಮಾನತೆಯ ಅಭಿವ್ಯಕ್ತಿಯ ಅವಕಾಶವನ್ನು ತಂದು ಕೊಟ್ಟದ್ದು ವೈಚಾರಿಕ ಕ್ರಾಂತಿ. ವೈಚಾರಿಕ ಕ್ರಾಂತಿಯಲ್ಲಿ ದೇವರ ದಾಸಿಮಯ್ಯ ಬಹಳ ಮುಖ್ಯವಾದವರು.

ದೇವರ ದಾಸಿಮಯ್ಯನವರು ತಮ್ಮ ವಚನದಲ್ಲಿ ಹೇಳಿದ ಮಾತು ಬರೀ ಮಾತಾಗದೆ ಬಸವಾದಿಗಳ ಕಾಲದಲ್ಲಿ ವ್ಯವಹಾರಕ್ಕೂ ಇಳಿಯಿತು. ಆದುದರಿಂದಲೇ ಈ ಕಾಲದಲ್ಲಿ ಬಹುಸಂಖ್ಯೆಯ ವಚನಗಾರ್ತಿಯರು ಕಾಣುತ್ತಾರೆ. ಅವರೆಂದರೆ ಮೋಳಿಗೆಯ ಮಾರಮ್ಮ, ಆಯ್ದಕ್ಕಿ ಲಕ್ಕಮ್ಮ, ನೀಲಾಂಬಿಕೆ, ಗಂಗಾಂಬಿಕೆ, ಮುಕ್ತಾಯಕ್ಕ ಮುಂತಾದವರು. ವಚನಗಾರ್ತಿಯರಲ್ಲೆಲ್ಲ ಅಕ್ಕ ಮಹಾದೇವಿ ಮುಖ್ಯವಾದವಳು ಅಕ್ಕ ಮಹಾದೇವಿ ಬರೀ ವಚನಗಳನ್ನು ಮಾತ್ರ ಬರೆಯದೆ "ಯೋಗಾಂಗ ತ್ರಿವಿಧಿ" ಎಂಬ ತ್ರಿಪದಿ ರೂಪದ ಪದಕೃತಿಯನ್ನು ಬರೆದಿದ್ದಾಳೆ. ಅಕ್ಕ ಮಹಾದೇವಿಯ ಬದುಕು ವಿಲಕ್ಷಣವಾದದ್ದು. ಆದ್ದರಿಂದಲೇ ಅವಳ ರಚನೆ ತುಮುಲಗಳಿಂದ ಕೂಡಿತ್ತು. ಮದುವೆ ಎಂಬ ಸಾಮಾಜಿಕ ವ್ಯವಸ್ಥೆಯನ್ನು ಧಿಕ್ಕರಿಸಿ ಅಲೌಕಿಕವಾದ ಚೆನ್ನಮಲ್ಲಿಕಾರ್ಜುನ ದೇವರನ್ನು ಪತಿಯಾಗಿ ಒಪ್ಪಿಕೊಂಡು ತನ್ನ ಅಂತರಂಗದ ಅಳಲುಗಳಿಗೆ, ತಾಕಲಾಟಗಳಿಗೆ, ಆಸೆಗಳಿಗೆ, ತನ್ನ ವೇದನೆಗಳಿಗೆ ವಚನ ರೂಪದಲ್ಲಿ ಅಭಿವ್ಯಕ್ತಿಯನ್ನು ಕೊಟ್ಟಿದ್ದಾಳೆ. ಉಳಿದಾವ ವಚನಕಾರರಲ್ಲೂ ಕಾಣದ ಭಾವಗೀತಾತ್ಮಕ ಗುಣ ಹಾಗೂ ಕಾಂತಾ ಸಂಹಿತ ಅಕ್ಕನ ವಚನಗಳಲ್ಲಿದೆ.

12ನೇ ಶತಮಾನದಲ್ಲಿ ಅಕ್ಕ ಮಹಾದೇವಿ ಹಾಗು ಮತ್ತಿತರ ವಚನಗಾರ್ತಿಯರನ್ನು ಬಿಟ್ಟರೆ ಕನ್ನಡದಲ್ಲಿ ಕೃತಿರಚನೆ ಮಾಡಿದ ನಿದರ್ಶನಗಳು ದೊರೆಯುವುದು ೧೮ನೇ ಶತಮಾನದಲ್ಲಿಯೇ. ಆಗಿನ ಕಾಲದಲ್ಲೇ ಸಮಾಜದ ವ್ಯವಸ್ಥೆಯ ವಿರುದ್ಧ ದನಿ ಎತ್ತುವುದು ಸುಲಭದ ಮಾತೇನಲ್ಲ? ಆ ಮಹಾನ್ ಕೆಲಸವನ್ನು ತನ್ನ ಧೈರ್ಯದಿಂದ ಸಾಧಿಸಿ ತನ್ನ ಮನಸ್ಸಿನ ಭಾವನೆಯನ್ನು ವ್ಯಕ್ತ ಪಡಿಸುವುದರಲ್ಲಿ ಜಯಶೀಲೆ ಆದವಳು ಅಕ್ಕ ಮಹಾದೇವಿ. ಚಿಕ್ಕದೇವರಾಯನ ಅರಮನೆಯ

ಪರಿಸರದಲ್ಲಿ ಹೊನ್ನಮ್ಮ, ಶೃಂಗಾರಮ್ಮ, ಚೆಲುವಾಂಬೆಯರೆಂಬ ಕವಿಯತ್ರಿಯರು ಇದ್ದರು. ಇವರಲ್ಲಿ ಹೊನ್ನಮ್ಮನ ಕಾವ್ಯ ಶಕ್ತಿ ಬಹಳ ತೀವ್ರವಾಗಿ ಕಾಣುವಂತದ್ದು ಹೊನ್ನಮ್ಮಳ ಪೂರ್ಣ ಹೆಸರು "ಸಂಚಿಯ ಹೊನ್ನಮ್ಮ".

ಸಂಚಿ ಎಂದರೆ "ಚೀಲ" ಎಂದರ್ಥ ಹೊನ್ನಮ್ಮ ಅರಮನೆಯಲ್ಲಿ ಎಲೆ ಅಡಿಕೆ ಚೀಲ ಹಿಡಿದು ರಾಜ ರಾಣಿಯರ ಸನ್ನಿಧಿಯಲ್ಲಿ ಕೆಲಸ ಮಾಡಿಕೊಂಡಿದ್ದಳು. ಅರಮನೆಯ ಉಳಿಗದ ಹೆಣ್ಣಾದ ಇವಳು, ಸಿಂಗಾರಾಯರಿಂದ ವ್ಯಾಸಂಗ ಪಡೆದು ಈಕೆಯು ಕೃತಿ ರಚಿಸಿದಳು. ಆ ಕೃತಿಯೇ "ಹದಿ ಬದೆಯ ಧರ್ಮ" ಇದು ಪತಿವ್ರತೆಯರ ಧರ್ಮವನ್ನು ಅವರ ಕರ್ತವ್ಯವನ್ನು ತಿಳಿಸುತ್ತದೆ. ಇದೊಂದು "ಗೃಹಿಣಿ ಧರ್ಮದ ಕೈಪಿಡಿ" ಆಗಿದೆ. ಕನ್ನಡದ ಹೆಣ್ಣು ಮಕ್ಕಳಿಗೆ ತಿಳಿಯುವ ಹಾಗೆ ಸಾಂಗತ್ಯದಲ್ಲಿ ಈ ನೀತಿ ಕಾವ್ಯ ರಚನೆಗೊಂಡಿದೆ.

"ಪೆಣ್ಣಲ್ಲವೆ ನಮ್ಮನ್ನೆಲ್ಲಾ ಪಡೆದ ತಾಯಿ
ಪೆಣ್ಣಲ್ಲವೇ ನಮ್ಮನ್ನೆಲ್ಲಾ ಪೊರೆದವಳು
ಪೆಣ್ಣು ಪೆಣ್ಣೆಂದೇಕೆ ಬೀಳುಗಳೆವರು
ಕಣ್ಣು ಕಾಣದ ಗಾವಿಲರು"

ಇದರ ಅರ್ಥ ಇಷ್ಟೇ ನಮ್ಮೆಲ್ಲರನ್ನು ಹಡೆದವಳು ಹೆಣ್ಣಲ್ಲವೆ, ಕಾಪಾಡಿದವಳು ಹೆಣ್ಣಲ್ಲವೆ, ಹೀಗಿರುವಾಗ ಹೆಣ್ಣನ್ನು ಏತಕೆ ನಿಕೃಷ್ಟರಾಗಿ ಕಾಣುತ್ತಾರೊ ಕಣ್ಣು ಕಾಣದ ಈ ಮೂರ್ಖರು. ವಾಹ್! ಎಂಥಹ ಸಾಲುಗಳು ಈ ಮಾತಿನ ಮೂಲಕ ಹೊನ್ನಮ್ಮ ಗಂಡಸರನ್ನು ಸರಿಯಾಗಿಯೇ ತರಾಟೆಗೆ ತೆಗೆದುಕೊಂಡಿದ್ದಾಳೆ.

ಹೊನ್ನಮ್ಮನ ಅನಂತರ ಸುಮಾರು ಹತ್ತು ಜನ ಕನ್ನಡದಲ್ಲಿ ಕೃತಿ ರಚನೆ ಮಾಡಿದ ಮಹಿಳೆಯರಿದ್ದಾರೆ. ಅದರಲ್ಲಿ ಹೆಳವನ ಕಟ್ಟೆ ಗಿರಿಯಮ್ಮ ಗಮನಾರ್ಹವಾದವರು. ಇವರೆಲ್ಲರೂ ವೈಷ್ಣವ ಭಕ್ತಿ ಪಂಥಕ್ಕೆ ಸೇರಿದ ಕವಿಯತ್ರಿಯರು. ಹೆಳವನ ಕಟ್ಟೆ ಗಿರಿಯಮ್ಮನ ವಿಚಾರದಲ್ಲಿ ಅನೇಕ ದಂತ ಕಥೆಗಳು ಪ್ರಚಲಿತವಾಗಿದೆ ರಂಗನಾಥನ ಭಕ್ತೆಯಾದ ಈಕೆ ಚಂದ್ರಹಾಸನ ಕಥೆ, ಸೀತಾ ಕಲ್ಯಾಣ, ಉದ್ದಾಲಕನ ಕಥೆಯ ಹಾಡು ಬರೆದಿದ್ದಾರೆ. ಇದರ ಜೊತೆಗೆ ಬ್ರಹ್ಮ ಕೊರವಂಜಿ ಎಂಬುದು ಅವಳ ಕೃತಿಯಾಗಿರಬಹುದೆಂದು ಅದರ ಅಂಕಿತದಿಂದಲೇ ಊಹಿಸಲಾಗಿದೆ ಗಿರಿಯಮ್ಮಳ ಅನೇಕ ಹಾಡುಗಳಲ್ಲಿ ಅನುಭಾವಿಕ ಮನೋಧರ್ಮ ವನ್ನು ನೋಡಿದರೆ ಅವಳು ಬಹು ದೊಡ್ಡ ಸಾಧಕಳಾಗಿದ್ದಳೆಂದು ನಮಗೆ ಅನಿಸುತ್ತದೆ. ಇನ್ನು ಹೊಸಗನ್ನಡ ಸಾಹಿತ್ಯಕ್ಕೆ ಕಾಲಿಟ್ಟರಂತೂ ಬಹಳಷ್ಟು ಮಹಿಳೆಯರು ತಮ್ಮ ಜೀವನದ ಅನುಭವಗಳನ್ನು ತಮ್ಮ ವಾಕ್ಯದಲ್ಲಿಯೇ, ತಮ್ಮ ಶೈಲಿಯಲ್ಲಿಯೇ ಹೇಳಿ ತಮ್ಮ ಸ್ಥಾನವನ್ನು ಮತ್ತಷ್ಟು ಭದ್ರಪಡಿಸಿಕೊಂಡಿದ್ದಾರೆ.

ಹೊಸಗನ್ನಡ ಸಾಹಿತ್ಯದಲ್ಲಿ ನಂಜನಗೂಡು ತಿರುಮಲಾಂಬ ಒಂದು ವಿಶಿಷ್ಟವಾದ ಹೆಸರು. "ಬಾಲ ವಿಧವೆ"ಯರು ಕಣ್ಣೀರಿನಲ್ಲಿ ಕೈ ತೊಳೆಯುವಂತಿದ್ದ ಅಂದಿನ ಸಮಾಜದಲ್ಲಿ ಸ್ವತಃ ಪುಸ್ತಕಗಳನ್ನು ಬರೆದು ಪ್ರಕಟಿಸಿ ಇತಿಹಾಸ ಮೆರೆದ ಧೀರ ಮಹಿಳೆ. ಇವರ ಜೊತೆಗೆ ಆರ್. ಕಲ್ಯಾಣಮ್ಮನವರು ಹೆಣ್ಣಿನ ಬಾಳಿನ ಕಷ್ಟ-ನಷ್ಟ, ಬಾಲ ವಿಧವೆಯರ ಪರಿತ್ಯಕ್ತ, ಹೀನ ಬದುಕಿನ ದುರಂತ ಚಿತ್ರವನ್ನು ಯಥಾವತ್ತಾಗಿ ಹಿಡಿದಿಟ್ಟಿದ್ದಾರೆ. ಸ್ತ್ರೀಯರ ಶೋಷಣೆಯ ಬಗ್ಗೆ ಅವರಿಗಿರುವ ಸಾಮಾಜಿಕ ಒತ್ತಡದ ಬಗ್ಗೆ ಅವರ ಮಾನಸಿಕ ಸ್ಥಿತಿಯ ಬಗ್ಗೆ ಯಶಸ್ವಿಯಾಗಿ ಬರೆದು, ಪ್ರಸಿದ್ಧಿಯನ್ನು ಹೊಂದಿದವರೇ ತ್ರಿವೇಣಿಯವರು. ಇವರ ಪ್ರಸಿದ್ಧ ಕಾದಂಬರಿಗಳೆಂದರೆ ಶರಪಂಜರ, ದೂರದಬೆಟ್ಟ, ಬೆಕ್ಕಿನಕಣ್ಣು, ಅಪಸ್ವರ, ಮುಚ್ಚಿದ ಬಾಗಿಲು, ಬೆಳ್ಳಿಮೋಡ ಮುಂತಾದವು.

ಇವರ ನಂತರ ಇನ್ನೂ ಅನೇಕ ಮಹಿಳಾ ಲೇಖಕಿಯರು ಬಹಳಷ್ಟು ಕೃತಿಯನ್ನು ರಚಿಸಿದ್ದಾರೆ. ಅವರೆಂದರೆ, ಅನುಪಮಾ ನಿರಂಜನರವರ "ಕೊಳಚೆ ಕೊಂಪೆ ದಾನಿಗಳು", ಎಂ.ಕೆ. ಇಂದಿರಾ ಅವರ "ಗೆಜ್ಜೆಪೂಜೆ", ವೀಣಾ ಶಾಂತೇಶ್ವರರ "ಗಂಡಸರು", ಗೀತಾ ನಾಗಭೂಷಣ್ ಅವರ "ಹಸಿಮಾಂಸದ ಹದ್ದುಗಳು", ಸಾರಾ ಅಬೂಬಕರ್ ಅವರ "ವಜ್ರಗಳು" ಇವಿಷ್ಟೇ ಅಲ್ಲದೆ ಇನ್ನೂ ಅನೇಕ ಕೃತಿಗಳು. ಸಮಾಜದಲ್ಲಿ ಕಂಡು ಬರುತ್ತಿರುವ ಅನಾಚಾರವನ್ನು ಅಮಾಯಕ ಹೆಣ್ಣಿನ ಮೇಲೆ ಪುರುಷ ಪ್ರಧಾನ ಸಮಾಜ ತೆರೆಮರೆಯಲ್ಲಿ ನಡೆಸುತ್ತಿರುವ ದೌರ್ಜನ್ಯತೆ, ದಬ್ಬಾಳಿಕೆಯನ್ನು ಯಾವುದೇ ಮುಲಾಜಿಲ್ಲದೆ ಬಯಲಿಗೆಳೆದಿದ್ದಾರೆ. ಯಾವುದೇ ಭೀತಿಯಿಲ್ಲದೆ ಪ್ರತಿಭಟಿಸಿದ್ದಾರೆ. ಬರಹದಲ್ಲಿ ವ್ಯಂಗ್ಯವು ಕೊಂಚ ಪ್ರಖರವಾಗಿದ್ದು ಪರಿಣಾಮಕಾರಿಯಾಗಿ ಮೂಡಿಬಂದಿದೆ.

70ರ ನಂತರ ಎರಡು ದಶಕಗಳಲ್ಲಿ ಲೇಖಕಿಯರ ಸಾಹಿತ್ಯ ಸ್ಪಷ್ಟವಾಗಿ, ಉದಾರವಾದಿ, ಸ್ತ್ರೀವಾದದಿಂದ ಮುಂದಕ್ಕೆ ಸಾಗುವಂತಿದೆ. ಸ್ತ್ರೀ ಸ್ವಾತಂತ್ರ್ಯಕ್ಕಾಗಿ ಮಾಡುವ ಹೋರಾಟ ನಮ್ಮ ಚರಿತ್ರೆ ಹಾಗೂ ಸಮಾಜ ರಚನೆಯಲ್ಲಿ ಇವೆ ಎಂಬ ತಿಳಿವು, ಈ ಬರಹಗಳಿಗೆ ಬೇರೆಯದೇ ಆಯಾಮ ನೀಡಿತು ಲಿಂಗಾದಾರಿತ ಅಸಮಾನತೆಯನ್ನು ಸಾರಾ ಅಬೂಬಕ್ಕರ್, ವೀಣಾ ಮೊದಲಾದವರ ಕೃತಿಗಳು ಸ್ಪಷ್ಟವಾಗಿ, ಸೂಕ್ಷ್ಮವಾಗಿ ಗುರುತಿಸುತ್ತದೆ ಶ್ರೀಮತಿ ಲೀಲಾವತಿಯವರ ಕಾವ್ಯ ಸಂಕಲನದ ಕೀಲಗುರ್ರಂ ಸಾಲುಗಳು ಇಂತಿವೆ.

"ಹೆಣ್ಣು ಅಂದ್ರು ಕಟ್ಟುನಿಟ್ಟಿನ
ಫ್ರೇಮಿನಾಗ ಫಿಕ್ಸ್ ಮಾಡಿದ

ಮಾತಾಡೋ ಪ್ರಾಣಿ

ಗಂಡಾದ್ರಾ ಎಲ್ಲದ್ರೂ

ಲೈಸೆನ್ಸ್ ಪಡೆದ ಕೀಲಗುರ್ರಂ"

ಇದರ ಅರ್ಥ ಹೀಗಿದೆ : ಹೆಣ್ಣಿಗಿದ್ದ ಸಾಮಾಜಿಕ ಕಟ್ಟುನಿಟ್ಟುಗಳು ಗಂಡಿಗಿರಲ್ಲ ಎಂದು ಪುರುಷ ಸಮಾಜಕ್ಕೆ ಸವಾಲನ್ನು ಕವಿಯತ್ರಿ ಹಾಕಿದ್ದಾರೆ, ಒಂದು ಅರ್ಥದಲ್ಲಿ ಅನ್ಯಾಯ ಹಾಗೂ ಪಕ್ಷಪಾತವನ್ನು ಇಲ್ಲಿ ಕಟುವಾಗಿ ವ್ಯಂಗ್ಯವಾಗಿ ಪ್ರತಿಭಟಿಸಿದ್ದಾಳೆ.

ಕನ್ನಡದ ಲೇಖಕಿಯರಲ್ಲಿ ಅನೇಕರು ವಿಮರ್ಶೆ ಎಂಬ ಪ್ರಕಾರವನ್ನು ಗಂಭೀರವಾಗಿ ಪರಿಗಣಿಸಿ, ಆ ಕ್ಷೇತ್ರದಲ್ಲಿಯೂ ಕೃಷಿ ನಡೆಸುತ್ತಿದ್ದಾರೆ. ಬಿಡಿ ಲೇಖನಗಳಲ್ಲಿ, ಪ್ರಾಯೋಗಿಕ ವಿಮರ್ಶೆ ಲೇಖನದಲ್ಲಿ, ಸಂಶೋಧನಾ ಪ್ರಬಂಧದಲ್ಲಿ ತಮ್ಮ ಸೃಜನತೆ ಮತ್ತು ಬಹುಶ್ರುಮತೆಯನ್ನು ವ್ಯಕ್ತಪಡಿಸಿದ್ದಾರೆ. ಇನ್ನು ಕೆಲವು ಲೇಖಕಿಯರು ವಿಮರ್ಶೆಯಲ್ಲಿ ತಮ್ಮ ಸ್ಥಾನವನ್ನು ನಿರ್ಮಿಸಿಕೊಳ್ಳುತ್ತಿದ್ದಾರೆ. ಮಹಿಳಾ ಸಾಹಿತ್ಯದಲ್ಲಿ ಪಿ.ಎಚ್.ಡಿ. ಡಾಕ್ಟರೇಟ್ ಪಡೆದವರೂ ಇದ್ದಾರೆ. ಸಂಶೋಧನಾ ಪ್ರಬಂಧದಲ್ಲಿ ಸಂಶೋಧನೆ ನಡೆಸಿ ಬೆಳೆದವರಿದ್ದಾರೆ. ಅವರಲ್ಲಿ ಪ್ರಮುಖರಾದವರು ಡಾ|| ವೀಣಾ ಶಾಂತೇಶ್ವರ, ಡಾ|| ವಿಜಯ, ಡಾ|| ಸುಮಿತ್ರಬಾಯಿ, ಡಾ|| ಶಕುಂತಲಾ ದರುಗಿ, ಡಾ|| ವಿಜಯಾದಬ್ಬೆ. ಈ ಮೊದಲೇ ಹೇಳಿದ ಲೇಖಕಿಯರ ಕಾವ್ಯಗಳನ್ನು ನೋಡಿದಾಗ ಭವಿಷ್ಯ ಆಶಾದಾಯಕ ಎನಿಸುತ್ತದೆ. ನೇಮಿಚಂದ್ರ, ವೈದೇಹಿ ಇತ್ಯಾದಿ ಲೇಖಕಿಯರ ಕಥೆಗಳು, ಕಾವ್ಯಗಳು ಪ್ರಬುದ್ಧತೆಯನ್ನು ಮರೆಸುತ್ತದೆ. ಆದರೆ ಕಾದಂಬರಿಯಲ್ಲಿ ಮಾತ್ರ ವಿಮರ್ಶಕರು ಆರೋಪಿಸುವ ಆ ಹಳೇ ದೋಷಗಳು ಇನ್ನೂ ಉಳಿದುಕೊಂಡು ಬಂದಿವೆ.

**Conclusion ತೀರ್ಮಾನ :**

ಹೊಸ ಮಹಿಳಾ ಲೇಖಕಿಯರು ಅನೇಕರು ಹೆಚ್ಚು ಮುಕ್ತ ಮನಸ್ಸಿನವರು ಹಾಗೂ ಸಂವೇದನಾಶೀಲರು ಆಗಿದ್ದಾರೆ. ಲೇಖಕಿಯರು ಪ್ರಾಮಾಣಿಕವಾಗಿ ಮನಸ್ಸು ಮಾಡಿದರೆ ಮುಂದಿನ ದಿನಗಳಲ್ಲಿ ಮಹಿಳಾ ಸಾಹಿತ್ಯದ ಬಗ್ಗೆ ಯಾರೊಬ್ಬರೂ ಬೆರಳು ತೋರಿಸಿ ಮಾತನಾಡುವ ಸಂದರ್ಭವೇ ಬರುವುದಿಲ್ಲ. ಹೀಗೆ ಬೆಳೆದು ಬಂದ ಸ್ತ್ರೀ ಸಮಾಜದಲ್ಲಿ ತಮ್ಮದೇ ಆದ ಅಸ್ತಿತ್ವವನ್ನು ತಮ್ಮ ಬರವಣಿಗೆಯ ಮೂಲಕ ಮಹಿಳೆಯರು ಕಂಡುಕೊಂಡಿದ್ದಾರೆ ಹೀಗಿದ್ದರೂ, ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿ ಮಹಿಳೆಯರು ಅಷ್ಟೇನೂ ತೃಪ್ತಿಕರ ಸ್ಥಾನಮಾನ ಹಾಗೂ ಅವಕಾಶಗಳನ್ನು ಪಡೆದಿಲ್ಲ ಎಂದೇ ಹೇಳಬಹುದು. ಇದಕ್ಕೆ ನಿದರ್ಶನ ಪೂರ್ವಕವಾಗಿ ನಾವು ಬಹುದಿನಗಳಿಂದಲೂ ರಾಜಕೀಯವಲಯದಲ್ಲಿ ಚರ್ಚಿತವಾಗುತ್ತಿರುವ, ಆದರೆ ಇಂದಿಗೂ ಯಾವುದೇ ನಿರ್ಣಯವನ್ನು ಕೈಗೊಳ್ಳಲು ಸಾಧ್ಯವಾಗಿಲ್ಲದ ಮಹಿಳೆಯರಿಗೆ ಶೇಕಡ ೩೩ರಷ್ಟು ಮೀಸಲಾತಿಯ ವಿಷಯವನ್ನು ಗಮನಿಸಬಹುದು. ಅಂದಿನಿಂದ ಇಂದಿನವರೆಗೆ ಮಹಿಳಾ ಸಾಹಿತ್ಯ ಸಾಧಿಸಿದ ಪ್ರಗತಿಯನ್ನು ಕುರಿತು ಹೇಳುವುದಾದರೆ ಲೇಖಕಿಯರು ಸಾಕಷ್ಟು ಬೆಳೆದಿದ್ದಾರೆ.

Bibliography **(ಗ್ರಂಥಸೂಚಿ)**


1. http://kn.m.wikipedia.org
2. http://vijayakarnataka.indiatimes
3. http://kn.m.wikisource.org
4. googleweblight.com
5. http://www.udayavani.com
6. http://en.m.wikipedia.org
7. www.sobagu.in
8. http://kannadaoneindia.com
9. www.vishwakannada.com